ಬೆಳ್ಳಾವೆ ರಮೇಶ್, ಬೆಂಗಳೂರು
*ರಾಜ್ಯೋತ್ಸವ ಪ್ರಶಸ್ತಿ ಬರಬೇಕಾದರೆ ಇರಬೇಕಾದ ಅರ್ಹತೆ?*



ರನ್ನಿಂಗ್ ರೇಟ್ ಒಂದೂಕಾಲು ಲಕ್ಷವಂತೆ!

ಜಾಕೋಬ್ ಡಿಸೋಜ, ಕುರುವಳ್ಳಿ
*ಹೆಣ್ಣಿನ ಅಂತರಾಳವನ್ನು ಅರಿಯುವ ಬಗೆ?*
ಬಹಳ ಸುಲಭ; ಸುಂಟರಗಾಳಿಯ ಮಧ್ಯಭಾಗದಲ್ಲಿ ಮೀನಿನ ಹೆಜ್ಜೆ ಇಟ್ಟು ಸಾಗಿದರೆ ಹೆಣ್ಣಿನ ಅಂತರಾಳ ಗೋಚರಿಸಿಬಿಡುತ್ತದೆ!

ಕೆ.ಚಂದ್ರಶೇಖರ, ಕೋಣನಕುಂಟೆ
*2012ರಲ್ಲಿ ಪ್ರಳಯ ಆಗೇಬಿಡುವುದಂತೆ; ದೀರ್ಘಾವಧಿ ಸಾಲಕ್ಕೆ ಅರ್ಜಿ ಗುಜರಾಯಿಸಲೇ ಗುರೂ?*
ಒಳ್ಳೆಯ ಆಲೋಚನೆ; ಆ ರೀತಿ ಭವಿಷ್ಯ ನುಡಿದವನನ್ನೇ ಗ್ಯಾರಂಟರ್/ಶೂರಿಟಿ ಆಗಿಸಿ ಸಾಲ ತೆಗೆದುಕೊಂಡುಬಿಡಿ!

ಪಿ.ಎಸ್. ಶ್ರೀವತ್ಸ, ಬೆಂಗಳೂರು
*ವಯಸ್ಸು 60 ಸಮೀಪಿಸುತ್ತಿದ್ದಂತೆ ಶೇಕಡ 90ಕ್ಕೂ ಹೆಚ್ಚು ಜನರಿಗೆ ಹಲ್ಲುನೋವು ಬರಲು ಕಾರಣ...?*
ನಮಗೆ ಮಾತ್ರ ನಿವೃತ್ತಿ ಇಲ್ಲವಾ? ಎಂದು ಹಲ್ಲುಗಳು ವಸಡಿನೊಡನೆ ತೋಡಿಕೊಳ್ಳುವ ನೋವೇ ಹಲ್ಲುನೋವು!

ಆರ್.ಎಲ್. ವಡ್ಡರ, ಮುದ್ದೇಬಿಹಾಳ
*ತಾರೆಯರು ಹೆಚ್ಚು ವಿವಾದಗಳಲ್ಲಿ ಸಿಲುಕುತ್ತಾರೆ, ಏಕೆ?*



ಹೆಚ್ಚು ವಿವಾಹಗಳಲ್ಲಿ ಸಿಲುಕುವುದರಿಂದ!

ಹೆಚ್.ಆರ್. ಕಡಿವಾಲ, ಬದಾಮಿ
*ಸಿರಿ ಶ್ರೀ ಹಾಗೂ ಚಿಂತೆ ಚಿತೆಗಳಿಗೆ ಏನು ವ್ಯತ್ಯಾಸ?*
ಶ್ರೀ ಪಟ್ಟಕ್ಕೆ ಏರಲು ಸಿರಿ ಸಹಕಾರಿ; ಚಿತೆ, ಚಟ್ಟಕ್ಕೆ ಏರಲು ಚಿಂತೆ ಸಹಕಾರಿ!

ಕೆ.ಮೈಥಿಲಿಕೃಷ್ಣ, ಬೆಂಗಳೂರು
*ವಿಧಾನಸೌಧ ಏತಕ್ಕೆ ಇದೆ?*
ಮಂತ್ರಿಗಳು ಮಕ್ಕಳಂತೆ ಕುಣಿದು, ಚೀರಾಡಿ, ಕುಪ್ಪಳಿಸಿ, ಜಗಳವಾಡಿ, ನಿದ್ರಿಸಿ, ಮನೆ ಸೇರಲು!

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ಭಾರ್ಯಾ ರೂಪವತಿ ಶತ್ರುಃ ಎಂದಿದ್ದರೂ ಹುಡುಗರು ರೂಪವತಿಯರನ್ನೇ ಬಯಸುವರಲ್ಲಾ...?*
ಶತ್ರುವನ್ನು ಪ್ರೀತಿಯಿಂದ ಗೆಲ್ಲುವ ಇರಾದೆಯಂತೆ!

ಕಂಡಕ್ಟರ್ ರಾಜು, ಗುಬ್ಬಿ
*ನಕ್ಕರೆ... ಶೋಭಕ್ಕನ ಹಾಗೆ ಕೆಂಪು ದವಡೆ ಕಾಣುವಂತೆ ನಗಬೇಕಂತೆ?*
ಹೌದು, ಇನ್‌ಸ್ಪೆಕ್ಷನ್‌ಗೆ ಅನುಕೂಲ ಎಂದನೊಬ್ಬ ದಂತವೈದ್ಯ.

ಎ.ಎಸ್. ಸ್ವಾಮಿ, ಸುರಪುರ
*ನಿಮಗೆ ಕೈ-ಬಿಸಿ ಮಾಡಿದರೆ ಬಹುಮಾನ ಕೊಡ್ತೀರಂತೆ...!?*
ಕೈಯಷ್ಟೇ ಅಲ್ಲ, ಕಮಲ, ಹೊರೆ ಹೊತ್ತ ಮಹಿಳೆ, ಆನೆಗಳು ಬಿಸಿ ಮಾಡಿದರೂ ಕೊಡುವುದಿಲ್ಲ!

ಎಂ.ಆರ್. ಪವನ್ ಕುಮಾರ್, ಬಳ್ಳಾರಿ
*ನೀವು ಹಿಂದಿನ ಉತ್ತರಭೂಪರಂತೆ ರಾಶಿಯನ್ನು ಗುಪ್ತನಾಮವಾಗಿರಿಸಿಕೊಂಡಿದ್ದರೆ ಯಾವ ರಾಶಿಯಾಗಿರುತ್ತಿತ್ತು?*
ರಾಮ್ (RAM) ಸಹ ರಾಶಿಯೇ ಮೇಷರಾಶಿ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಸುಧಾ ವಾರಪತ್ರಿಕೆಯ ಲಿಂಗ ಯಾವುದ್ರಪ್ಪೋ?*
ಇಷ್ಟಲಿಂಗ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ತಿರುಕನ ಕನಸಿಗೂ, ಪ್ರೇಮಿಯ ಕನಸಿಗೂ ಇರುವ ವ್ಯತ್ಯಾಸವೇನು ಗುರುವರ್ಯಾ?*
ತಿರುಕನ ಕನಸಿಗೆ ಮುಪ್ಪಿನ ಷಡಕ್ಷರಿ ಕಾರಣ; ಪ್ರೇಮಿಯ ಕನಸಿಗೆ ತಾರುಣ್ಯದ ದಿನಚರಿ ಕಾರಣ!

ಕೆ.ಹೆಚ್. ರಾಮಕೃಷ್ಣಾ ರೆಡ್ಡಿ, ಯಲಹಂಕ
*ಬೆಂಗಳೂರಿನ ಜನರಿಗೂ, ಮಂಗಳೂರಿನ ಜನರಿಗೂ ವ್ಯತ್ಯಾಸವೇನು?*
ಮಂಗಳೂರಿನವರದು ಮಂಡೆ ಮಾತ್ರ ಬೆಚ್ಚ; ಬೆಂಗಳೂರಿನವರದು ಮಂಡೆಯಿಂದ ಸಂಡೆಯವರೆಗೆ ಬೆಚ್ಚ!

ಎಂ.ಎಸ್. ಸೋಮಶೇಖರ್, ಮೈಸೂರು
*ಕನ್ನಡಕ್ಕೂ, ಕನ್ನಡಿಗೂ ಇರುವ ನಿಕಟ ಸಂಬಂಧವೇನು?*
ಕನ್ನಡ ಪುಲ್ಲಿಂಗ, ಕನ್ನಡಿ ಸ್ತ್ರೀಲಿಂಗ!

## ಬಹುಮಾನಿತ ಪ್ರಶ್ನೆ

ಮಾಲತಿರಾಜು, ಬೆಂಗಳೂರು
*ಮಹಿಳಾಮಣಿಗಳು ಎಲ್ಲಾ ಕ್ಷೇತ್ರಗಳನ್ನೂ ಪ್ರವೇಶಿಸಿಯಾಯಿತು. ಉಳಿದಿರುವುದು ಏನಾದರೂ ಇದೆಯೇ?*
ಅಂದರೇ... ಅವರು ಪ್ರವೇಶಿಸಿದ ಕ್ಷೇತ್ರಗಳಲ್ಲಿ ಯಾವುದೂ ಉಳಿದಿಲ್ಲವೇ?

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಐ. ಕ್ಯಾಂಪಸ್
*ಜಾಹೀರಾತಿಲ್ಲದ ಟೀವಿವಾಹಿನಿ ಪ್ರಸಾರವಾದರೆ ಏನಾಗುತ್ತೆ?*
ಅದು ಬ್ಲ್ಯಾಕ್‌ಮೇಲ್ ಚಾನಲ್ ಅಂತ ಜಾಹೀರಾಗತ್ತೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಒಂದು ವೇಳೆ ಹಣಕ್ಕೆ ಜೀವ ಇದ್ದಿದ್ದರೆ?*
ಬೀರು, ಲಾಕರ್‌ಗಳಲ್ಲಿ ತುರುಕಬೇಡವೋ ಪಾಪಿ, ಕಿಟಕಿ ಇಲ್ಲ, ಬಾಗಿಲಿಲ್ಲ, ಗಾಳಿ ಇಲ್ಲ. ಉಸಿರಾಡಕ್ಕೇ ಕಷ್ಟವಾಗತ್ತೆ ಎಂದು ಬೈಯುತ್ತಿದ್ದವು!

ರವಿ ಎಂ. ಪೈ, ಹೊನ್ನಾವರ
*ಸಂಬಂಧಗಳು ಯಾವಾಗ ಗಟ್ಟಿಯಾಗುತ್ತವೆ?*



ಇಬ್ಬರಲ್ಲೊಬ್ಬರು ಮೆತ್ತಗಾದಾಗ!

ಕೆ.ಜಿ. ಶೇಖರಪ್ಪ, ಸಿರಿಗೆರೆ
*ಪ್ರಾಮಾಣಿಕ ವರ್ತನೆಯಿಂದ ಶ್ರೀಮಂತರಾಗಲು ಸಾಧ್ಯವೇ ಸಾರ್?*
ಬರೀ ಪ್ರಾಮಾಣಿಕತೆಯಿಂದಲೇ...? ಹೆಚ್ಚೆಂದರೆ ಹೈಕಮಾಂಡ್‌ನ ಕೈಗೊಂಬೆಯಾಗಬಹುದಷ್ಟೆ!

ಶಿವಕುಮಾರ, ಪತ್ರಿಮಠ
*ಪುನರ್ಜನ್ಮವನ್ನು ನೀವು ನಂಬುತ್ತೀರಾ?*
ನಂಬುತ್ತೇನೆ! ನಗರಗಳಲ್ಲಿ ಪ್ರತಿ ಬಾರಿ ರಸ್ತೆ ದಾಟಿದಾಗಲೂ ಪುನರ್ಜನ್ಮವೇ!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ
*ಕನ್ನಡದ ಸಾಹಿತಿಗಳು ಇಂಗ್ಲಿಷರ ದಿರಿಸು ಧರಿಸಿ ಕನ್ನಡ ಸಮ್ಮೇಳನಕ್ಕೆ ಬರುವುದು ಸರಿಯೇ?*
ಪಂಚೆ, ಪೇಟ ಧರಿಸಿ ಇಂಗ್ಲಿಷ್ ಮಾತನಾಡುವುದಕ್ಕಿಂತಲೂ ಇದು ವಾಸಿ.

ರಾಮ್